6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಎಸ್.ಸಿ. 58/2019

ಫಿರ್ಯಾದುದಾರರುಃ ಕಗ್ಗಲೀಪುರ ಪೊಲೀಸ್ ಠಾಣೆ

_ವಿರುದ್ಧ_

ಆರೋಪಿತರುಃ ಎ.1) ನಾಗರಾಜು @ ಈಸು,
ಬಿನ್ ವೆಂಕಟೇಶಪ್ಪ,
ವರ್ಷ,
ವಾಸಃ ಸಂಃ 58, 2ನೇ ಕ್ರಾಸ್,
ವೀರಭದ್ರನಗರ, ಹೊಸಕೆರೆಹಳ್ಳಿ,
ಬನಶಂಕರಿ 3ನೇ ಹಂತ, ಬೆಂಗಳೂರು.

ಎ2) ಕಿರಣ @ ಅಮಾವಾಸ್ಯ,
ಬಿನ್ ಕೃಷ್ಣ,
ವರ್ಷ,
ವಾಸಃ ಸಂಃ 31, 1ನೇ ಕ್ರಾಸ್,
ಜನಶಕ್ತಿನಗರ, ಹೊಸಕೆರೆಹಳ್ಳಿ,
ಬನಶಂಕರಿ 3ನೇ ಹಂತ, ಬೆಂಗಳೂರು.

ಎ3) ಕಿರಣ @ ಡಚ್ಚಿ @ ಕೀರ್ತಿ @
ಡಿಯೋ ಡಚ್ಚಿ,
ಬಿನ್ ಸಿದ್ದರಾಜು,
ವರ್ಷ,
ವಾಸಃ 3ನೇ ಕ್ರಾಸ್,
ಈಶ್ವರಿ ಶಾಲೆಯ ಹತ್ತಿರ,
ಈಶ್ವರಿ ನಗರ, ಬೆಂಗಳೂರು.

ಎ4) ಅಜಯ @ ಕರಿಯ
ಬಿನ್ ನಾಗರಾಜು,
ವರ್ಷ,
ವಾಸಃ ಕೃಷ್ಣಪ್ಪ ಕಟ್ಟಡ, 3ನೇ ಕ್ರಾಸ್,
ದತ್ತಾತ್ರೇಯನಗರ, ಬೆಂಗಳೂರು.

ಎ5) ಪ್ರವೀಣ್‌ಕುಮಾರ್ ಸಿ @ ಪ್ರವೀಣ @ ರಾಜ
ಬಿನ್ ಚೆಲುವರಾಜು,
ವರ್ಷ,
ವಾಸಃ 2ನೇ ಕ್ರಾಸ್,
ಮುನೇಶ್ವರ ದೇವಸ್ಥಾನದ ಹಿಂದೆ,
ಮುಕಾಂಬಿಕಾ, ಬೆಂಗಳೂರು.

ಎ6) ಕಾರ್ತಿಕ @ ಕಾಟು
ಬಿನ್ ಮುತ್ತುರಾಜು,
ವರ್ಷ,
ವಾಸಃ ಸಂಜೀವಿನಿ ವಾಟರ್ ಸಪ್ಲೈ ಕಟ್ಟಡ,
ಸಾರ್ವಭೌಮನಗರ,
ಬೆಂಗಳೂರು.

## ಆರೋಪಣೆ

ನಾನು ಶ್ರೀ ಮೋಹನ್ ಬಾಡಗಂಡಿ, ಬಿ.ಕಾಂ.ಎಲ್‌ಎಲ್‌ಬಿ(ಸ್ಪೆಷಲ್), ಪೀಠಾಸೀನಾಧಿಕಾರಿ, 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ಈ ಕೇಸಿನ ಆರೋಪಿಯಾದ ನಿಮ್ಮ ಮೇಲೆ ಈ ದಿನ ದಿನಾಂಕ 18.01.2020 ರಂದು ಹೊರಿಸುವ ಆಪಾದನೆ ಏನೆಂದರೆ,

ದಿನಾಂಕ 03.03.2017 ರಂದು ಸಂಜೆ 4.15 ಗಂಟೆ ಸಮಯ, ಬಿ.ಎಂ. ಕಾವಲ್ ಅರಣ್ಯ ಪ್ರದೇಶದ ಸರ್ವೆ ನಂಃ 58, ಆಲದ ಮರದ ಬಳಿ, ನೈಸ್ ರಸ್ತೆಯಿಂದ ಅಗರ ಗ್ರಾಮದ ಕಡೆ ಹೋಗುವ ರಸ್ತೆ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಕಗ್ಗಲೀಪುರ ಪೋಲಿಸ್ ಠಾಣಾ ಸರಹದ್ದು, 1 ರಿಂದ 6ನೇ ಆರೋಪಿಗಳಾದ ನೀವು ಸಾರ್ವಜನಿಕರಲ್ಲಿ ದರೋಡೆ ಮಾಡುವ ಉದ್ದೇಶದಿಂದ ಮೇಲೆ ಹೇಳಿದ ಸ್ಥಳಕ್ಕೆ 6ನೇ ಆರೋಪಿಯಾದ ನೀನು ತಂದಿದ್ದ ಹೊಂಡಾ ಆಕ್ಟಿವಾ ಮತ್ತು ಸ್ಪೆಂಡರ್ ಮೋಟಾರ್ ಸೈಕಲ್‌ಗಳಲ್ಲಿ ಬಂದು ಸದರಿ ಸ್ಥಳದಲ್ಲಿ ಪೋಟೋ ತೆಗೆದುಕೊಳ್ಳುತ್ತಿದ್ದ ಸಾಕ್ಷಿ 1 ರಿಂದ 3 ರವರ ಬಳಿ ಸಿಗರೇಟ್ ಕೇಳುವ ನೆಪದಲ್ಲಿ ಹೋಗಿ 6ನೇ ಆರೋಪಿಯಾದ ನೀನು ಮಚ್ಚನ್ನು ತೆಗೆದು ಸಾಕ್ಷಿ3-ಯಶಸ್ ರವರ ಕತ್ತಿನ ಮೇಲಿಟ್ಟು ಶರ್ಟನ್ನು ಹಿಡಿದು ಎಳೆದಾಡಿ ಹೆದರಿಸಿದ್ದು, 2ನೇ ಆರೋಪಿಯಾದ ನೀನು ಸಾಕ್ಷಿ 3 ರವರ ಬಳಿ ಇದ್ದ ಲೆನೆವೋ ಮೊಬೈಲ್ ಹ್ಯಾಂಡ್ ಸೆಟ್ ಮತ್ತು ರೂ.300/- ಹಣವನ್ನು ಕಿತ್ತುಕೊಂಡಿದ್ದು, 1 ಮತ್ತು 5ನೇ ಆರೋಪಿಗಳಾದ ನೀವು ಸಾಕ್ಷಿ1-ಅಭಿನವ್ ಬಳಿ ಇದ್ದ ಕ್ಯಾನೆನ್ ಕ್ಯಾಮೆರಾ, ರೆಡ್‌ಮಿ ನೋಟ್ ಮೊಬೈಲ್ ಹ್ಯಾಂಡ್ ಸೆಟ್ ಹಾಗೂ ರೂ.100- ಹಣವನ್ನು ಹಾಗೂ 1, 3 ರಿಂದ 5ನೇ ಆರೋಪಿಗಳಾದ ನೀವು ಸಾಕ್ಷಿ2-ವಿಶ್ವಾಸ್ ರವರ ಬಳಿ ಇದ್ದ ರೂ.50/- ಹಣವನ್ನು ಕಿತ್ತುಕೊಂಡು ಮೊಬೈಲನ್ನು ಕೊಡುವಂತೆ ಕೇಳಿದಾಗ ಕೊಡಲು ನಿರಾಕರಿಸಿದ್ದಕ್ಕೆ 6ನೇ ಆರೋಪಿಯಾದ ನೀನು ಮಚ್ಚನ್ನು ಉಲ್ಟಾ ಹಿಡಿದು ಸಾಕ್ಷಿ2 ರವರ ಕೈಗೆ ಹೊಡೆದು ನೋವುಂಟು ಮಾಡಿ ಒಪ್ಪೋ ಮೊಬೈಲ್ ಹ್ಯಾಂಡ್ ಸೆಟ್ಟನ್ನು ಕಿತ್ತುಕೊಂಡು ದರೋಡೆ ಮಾಡಿ ನೀವು ಬಂದಿದ್ದ ದ್ವಿಚಕ್ರ ವಾಹನಗಳಲ್ಲಿ ಹೊರಟು ಹೋಗಿದ್ದು

ಈ ಮೂಲಕ ಭಾ.ದಂ.ಸಂ.ಕಲಂ 397 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿರುತ್ತೀರಿ, ಹಾಗೂ ಈ ನ್ಯಾಯಾಲಯದ ಸಂಜ್ಞೇಯಕದಲ್ಲಿರುತ್ತೀರಿ.

ಸದರಿ ಆಪಾದನೆಯ ವಿಚಾರಣೆಯು ಸದರಿ ನ್ಯಾಯಾಲಯದಲ್ಲಿ ಜರುಗಬೇಕೆಂದು ನಿರ್ದೇಶಿಸುತ್ತೇನೆ.

ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದೆಯೆಂದು ದೃಢೀಕರಿಸುತ್ತೇನೆ.

(ಮೋಹನ್ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. 58/2019**

**ಫಿರ್ಯಾದುದಾರರುಃ** **ಕಗ್ಗಲೀಪುರ ಪೊಲೀಸ್ ಠಾಣೆ**

**_ವಿರುದ್ಧ_**

**ಆರೋಪಿತರುಃ**

**ಆರೋಪಿಯ ಹೇಳಿಕೆ ಪತ್ರ**

ಪ್ರಶ್ನೆ _ 1 ಃ ಓದಿ ಹೇಳಿ ವಿವರಿಸಿದ ಆಪಾದನೆ ತಿಳಿಯಿತೆ?
ಉತ್ತರ ಃ

ಪ್ರಶ್ನೆ _ 2 ಃ ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ನಡೆಸಬೇಕೆನ್ನುವಿರೊ?
ಉತ್ತರ ಃ

ದಿನಾಂಕ 18.01.2020 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪಣೆಯನ್ನು ಓದಿ ತಿಳಿಸಿ, ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.

(ಮೋಹನ್ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿಯ ಸಹಿ